**ಸಾಕ್ಷಿಯನ್ನು ದಿನಾಂಕಃ 10.02.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎಸ್ ಎಲ್ ಆರ್ ವಕೀಲರಿಂದಃ**

ನಾನು ನಂ.2837 ರ ಮೂಲ ಪತ್ರ ವನ್ನು ಹಾಜರು ಪಡಿಸಿದ್ದು ಅದನ್ನು ನಿಶಾನೆಯಾಗಿ ಗುರುತಿಸುವಂತೆ ಕೋರುತ್ತೇನೆ. ಸದರಿ ಪತ್ರದಲ್ಲಿನ ಬರವಣಿಗೆಗಳು ಮಾಸಿ ಹೋಗಿದ್ದು ಬರಿ ಗಣ್ಣಿಗೆ ಓದಲು ಕಾಣಿಸುತ್ತಿರುವುದಿಲ್ಲ ಹಾಗೂ ಸದರಿ ದಾಖಲೆ ಯಾವ ಪತ್ರ ಎಂಬ ಬಗ್ಗೆ ನಾಮಾಂಕಿತವನ್ನೂ ಸಹ ಓದಲು ಕಾಣಿಸುತ್ತಿಲ್ಲ. ವಾದಿ ಪರ ವಕೀಲರು ಸದರಿ ದಾಖಲೆಯ ಬಗ್ಗೆ ಉಪನೊಂದಣಾಧಿಕಾರಿ ಗಳಿಂದ ಮೂಲ ರಿಜಿಸ್ಟರ್ ತರಿಸುವ ಉದ್ದೇಶಕ್ಕೆ ನಿಶಾನೆಯಾಗಿ ಮಾಡಬೇಕೆಂದು ಕೋರಿರುತ್ತಾರೆ. ಆದ ಕಾರಣ ಸದರಿ ದಾಖಲೆಯನ್ನು ನಿಪಿಃ 43 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಜಿ ಎನ್ ಎಸ್ ವಕೀಲರಿಂದಃ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.